
# ನಿಮ್ಮೊಡನೆ

## ಮಹಿಳೆಯರ ಸುರಕ್ಷತೆ-ಘನತೆಗೆ ಧಕ್ಕೆಯುಂಟಾದರೆ ಸ್ವಾತಂತ್ರ್ಯ-ಸಮಾನತೆಗೆ ಅರ್ಥವಾದರೂ ಏನು?

**ಮಹಿಳೆಯರ ಸುರಕ್ಷತೆಯನ್ನು ಖಾತರಿಪಡಿಸಿ ಲಿಂಗ ತಾರತಮ್ಯವನ್ನು ನಿವಾರಿಸದೆ ಹೋದರೆ, ಸ್ವಾತಂತ್ರ್ಯ–ಸ್ವರಾಜ್ಯದಂತಹ ಆಶಯಗಳು ಕೃತಿರೂಪದಲ್ಲಷ್ಟೇ ಉಳಿಯುತ್ತವೆ. ಹೆಣ್ಣನ್ನು ದೌರ್ಜನ್ಯಕ್ಕೀಡು ಮಾಡುವ ಘಟನೆಗಳು ಆತಂಕಕಾರಿ ನಿಜ. ಅದಕ್ಕಿಂತಲೂ ಹೆಚ್ಚು ಆತಂಕಪಡಬೇಕಾದುದು, ಅಂತಹ ದಮನಕ್ಕೆ ನಾಗರಿಕರ ಸಮಾಜ ಮೌನವಾಗಿರುವುದು.**




ಈಶ್ವರ್

ದೇಶವನ್ನು ಹೆಣ್ಣಿನ ರೂಪದಲ್ಲಿ, ತಾಯಿಯ ರೂಪದಲ್ಲಿ ಗೌರವಿಸುತ್ತೇವೆ. ದೇಶದೊಳಗಿನ ಮಹಿಳೆಯರನ್ನು ಹೇಗೆ ನಡೆಸಿಕೊಳ್ಳುತ್ತೇವೆ? ಅಮೃತ ಮಹೋತ್ಸವವನ್ನು ಹಾದು ಮುನ್ನಡೆದಿರುವ ಸ್ವತಂತ್ರ ಭಾರತದಲ್ಲಿ ಮಹಿಳೆಯರ ಸ್ಥಿತಿಗತಿ ಹೇಗಿದೆ?

ದೇಶದ ವಿವಿಧ ಭಾಗಗಳಿಂದ ಪ್ರತಿ ನಿತ್ಯ ವರದಿಯಾಗುವ ಅತ್ಯಾಚಾರ ಪ್ರಸಂಗಗಳು ಹಾಗೂ ಮಣಿಪುರದ ಇತ್ತೀಚಿನ ವಿದ್ಯಮಾನಗಳನ್ನು ನೆನಪಿಸಿಕೊಂಡರೆ ಮಾತಿಗೂ ಕೃತಿಗೂ ಇರುವ ಅಂತರ ಸ್ಪಷ್ಟವಾಗುತ್ತದೆ. ಈ ಕಳವಳದ ಕೊಂಡಿಯ ರೂಪದಲ್ಲಿ, ಮಹಿಳೆಯರು ಮತ್ತು ಬಾಲಕಿಯರ ನಾಪತ್ತೆಯ ಪ್ರಸಂಗಗಳನ್ನು ಗಮನಿಸಬಹುದು.

2019ರಿಂದ 2021ರ ಮೂರು ವರ್ಷಗಳ ಅವಧಿಯಲ್ಲಿ 13.13 ಲಕ್ಷಕ್ಕೂ ಹೆಚ್ಚು ಬಾಲಕಿಯರು ಮತ್ತು ಮಹಿಳೆಯರು ದೇಶದ ವಿವಿಧ ಭಾಗಗಳಲ್ಲಿ ನಾಪತ್ತೆಯಾಗಿದ್ದ ಪ್ರಕರಣಗಳು ದಾಖಲಾಗಿವೆ ಎಂದು ಕೇಂದ್ರ ಗೃಹ ಸಚಿವಾಲಯ ಸಂಸತ್ತಿಗೆ ತಿಳಿಸಿದೆ. ಮಹಿಳೆಯರ ಸುರಕ್ಷತೆ ಹಾಗೂ ಸಬಲೀಕರಣಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಲವು ಕಾರ್ಯಕ್ರಮಗಳು ಜಾರಿಯಲ್ಲಿರುವ ನಡುವೆಯೂ ಬಾಲಕಿಯರು ಮತ್ತು ಮಹಿಳೆಯರ ಸುರಕ್ಷತೆ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗಿಲ್ಲ. ಮಹಿಳೆಯರ ನಾಪತ್ತೆಯ ಬಹುತೇಕ ಪ್ರಕರಣಗಳನ್ನು ಪೊಲೀಸರು ಬಗೆಹರಿಸಿದ್ದಾರೆನ್ನುವುದು ಸಮಾಧಾನಕರ ಸಂಗತಿಯಾದರೂ, ಮತ್ತೊಂದಷ್ಟು ಪ್ರಕರಣಗಳು ನಿಗೂಢವಾಗಿಯೇ ಉಳಿದಿವೆ. ದೊಡ್ಡ ಸಂಖ್ಯೆಯ ಹೆಣ್ಣುಮಕ್ಕಳು ಎಲ್ಲಿಗೆ ಹೋದರು ಹಾಗೂ ಏನು ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಸುಲಭವಲ್ಲ. ಮಾನಸಿಕ ಅಸ್ವಸ್ಥತೆ, ತಪ್ಪು ಸಂವಹನ, ಕೌಟುಂಬಿಕ ದೌರ್ಜನ್ಯ, ಬಲವಂತದ ಮದುವೆ, ಲೈಂಗಿಕ ಶೋಷಣೆ ಸೇರಿದಂತೆ ಹಲವು ಸಂಗತಿಗಳು ಮಹಿಳೆಯರ ಕಣ್ಮರೆಗೆ ಕಾರಣವಾಗಿವೆ ಎಂದು ಹೇಳಲಾಗುತ್ತಿದೆ. ಅಸಹಾಯಕ ಮಹಿಳೆಯರು ಮತ್ತು ಅಪ್ರಾಪ್ತ ಬಾಲಕಿಯರಿಗೆ ಕೆಲಸ ಕೊಡಿಸುವ ಆಮಿಷವೊಡ್ಡಿ ಅವರನ್ನು ಕಳ್ಳಸಾಗಣೆ ಮಾಡುವ ಜಾಲಗಳು ಸಕ್ರಿಯವಾಗಿದ್ದು, ಕಾನೂನು ಸುವ್ಯವಸ್ಥೆಗೆ ಸವಾಲಾಗಿ ಪರಿಣಮಿಸಿವೆ. ಒಂದೆಡೆ, ಅತ್ಯಾಚಾರದ ಬರ್ಬರ ಪ್ರಕರಣಗಳು ದೇಶದ ವಿವಿಧ ಭಾಗಗಳಿಂದ ವರದಿಯಾಗುತ್ತಿವೆ. ಇನ್ನೊಂದೆಡೆ, ಹೆಣ್ಣುಮಕ್ಕಳು ನಿಗೂಢವಾಗಿ ನಾಪತ್ತೆಯಾಗುತ್ತಿದ್ದಾರೆ. ಹೆಣ್ಣುಮಕ್ಕಳ ಆತ್ಮವಿಶ್ವಾಸವನ್ನು ಉಡುಗಿಸುವಂತಹ ಈ ಘಟನೆಗಳು ಸಾಮಾಜಿಕ ವ್ಯವಸ್ಥೆ ಸಮತೋಲನ ತಪ್ಪಿರುವುದಕ್ಕೆ ನಿದರ್ಶನದಂತಿವೆ.

ಮಹಿಳೆಯರ ಸುರಕ್ಷತೆಗಾಗಿ ದೇಶದಲ್ಲಿ ಸಾಕಷ್ಟು ಕಾನೂನುಗಳಿವೆ. ಲೈಂಗಿಕ ಅಪರಾಧಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಉದ್ದೇಶದ 'ಅಪರಾಧ ಕಾನೂನು (ತಿದ್ದುಪಡಿ) 2018' ಕಾಯ್ದೆಯು, 12 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರಕ್ಕೆ ಮರಣದಂಡನೆಯಂತಹ ಕಠಿಣ ದಂಡನೆಯನ್ನು ವಿಧಿಸಲು ಅವಕಾಶ ಕಲ್ಪಿಸಿದೆ. ಅತ್ಯಾಚಾರ ಪ್ರಕರಣಗಳ ತನಿಖೆ ಹಾಗೂ ಚಾರ್ಜ್ ಶೀಟ್ ಎರಡು ತಿಂಗಳಲ್ಲಿ ಪೂರ್ಣಗೊಳಿಸುವುದು ಹಾಗೂ ವಿಚಾರಣೆಯನ್ನು ಮುಂದಿನ ಎರಡು ತಿಂಗಳಲ್ಲಿ ಪೂರ್ಣಗೊಳಿಸುವುದನ್ನು ಈ ಕಾಯ್ದೆ ಕಡ್ಡಾಯಗೊಳಿಸಿದೆ. ಸಂಕಷ್ಟದಲ್ಲಿರುವ ಹೆಣ್ಣುಮಕ್ಕಳಿಗೆ ನೆರವು ನೀಡಲಿಕ್ಕಾಗಿ ತುರ್ತು ಸಹಾಯ ಸಂಖ್ಯೆ 112ನ್ನು ರೂಪಿಸಲಾಗಿದೆ. ಈ ಸಂಖ್ಯೆಯನ್ನು ಸಂಪರ್ಕಿಸಿದ ತಕ್ಷಣ ಕಂಪ್ಯೂಟರ್ ನೆರವಿನ ಮೂಲಕ ಕರೆ ಬಂದ ಸ್ಥಳವನ್ನು ಗುರುತಿಸಿ, ತಕ್ಷಣವೇ ಮಹಿಳೆಗೆ ನೆರವು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಬೆಂಗಳೂರು, ದೆಹಲಿ, ಅಹಮದಾಬಾದ್, ಚೆನ್ನೈ, ಕೋಲ್ಕತ್ತ, ಲಖನೌ, ಹೈದರಾಬಾದ್ ಮತ್ತು ಮುಂಬೈ ನಗರಗಳಲ್ಲಿ ಹೆಣ್ಣುಮಕ್ಕಳ ಸುರಕ್ಷತೆಯನ್ನು ಖಾತರಿಪಡಿಸುವ 'ಸೇಫ್ ಸಿಟಿ' ಯೋಜನೆಯನ್ನು ಮೊದಲ ಹಂತದಲ್ಲಿ ಜಾರಿಗೊಳಿಸಲಾಗಿದೆ. 2018ರಲ್ಲಿ ರೂಪುಗೊಂಡಿರುವ 'ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್', ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ಲೀಲ ಸಂದೇಶ, ವಿಡಿಯೊ ಹಂಚಿಕೊಳ್ಳುವವರನ್ನು ನಿಯಂತ್ರಣದಲ್ಲಿಡಲು ಪ್ರಯತ್ನಿಸುತ್ತಿದೆ. ಇಷ್ಟೆಲ್ಲ ಕಾರ್ಯಕ್ರಮಗಳ ನಂತರವೂ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ಮನೆಯೊಳಗೂ ಹೊರಗೂ ಹೆಚ್ಚುತ್ತಲೇ ಇವೆ. ಉದ್ಯೋಗದ ಸ್ಥಳಗಳು ಕೂಡ ಮಹಿಳೆಗೆ ಸುರಕ್ಷಿತವಾಗಿಲ್ಲದಿರುವ ಉದಾಹರಣೆಗಳು ಆಗಾಗ ವರದಿಯಾಗುತ್ತಲೇ ಇರುತ್ತವೆ.

ಸಮಾಜದಲ್ಲಿ ಬೇರುಬಿಟ್ಟಿರುವ ಲಿಂಗ ತಾರತಮ್ಯ ಮನೋಧರ್ಮ ಕೂಡ ಮಹಿಳೆಯ ಸುರಕ್ಷತೆಗೆ ಸವಾಲು ಒಡ್ಡುವಂತಹದ್ದು. ಲಿಂಗಭೇದವನ್ನು ನಿವಾರಿಸಬೇಕಾದ ರಾಜಕಾರಣಿಗಳು ಮತ್ತು ಅಧಿಕಾರಿಗಳು ಕೂಡ ಅವಕಾಶ ದೊರೆತಾಗಲೆಲ್ಲ ಮಹಿಳೆಯರನ್ನು ಅವಮಾನಿಸುವ ಮಾತುಗಳನ್ನು ಆಡುತ್ತಿರುತ್ತಾರೆ. ಸಾರ್ವಜನಿಕ ವಲಯದಲ್ಲಿ ಲಿಂಗಸೂಕ್ಷ್ಮತೆ ಎನ್ನುವುದು ದುಬಾರಿ ಮೌಲ್ಯ ಎನ್ನುವಂತಾಗಿದೆ.

ಮಹಿಳೆಯರ ಸುರಕ್ಷತೆಯನ್ನು ಖಾತರಿಪಡಿಸುವುದರ ಜೊತೆಗೆ ಲಿಂಗ ತಾರತಮ್ಯವನ್ನು ನಿವಾರಿಸದೆ ಹೋದರೆ, ಸ್ವಾತಂತ್ರ್ಯ–ಸ್ವರಾಜ್ಯದಂತಹ ಆಶಯಗಳು ಕೃತಿರೂಪದಲ್ಲಷ್ಟೇ ಉಳಿಯುತ್ತವೆ. ಹೆಣ್ಣನ್ನು ಅವಮಾನಿಸುವ, ದೌರ್ಜನ್ಯಕ್ಕೀಡು ಮಾಡುವ ಘಟನೆಗಳು ಆತಂಕಕಾರಿ ನಿಜ. ಆದರೆ, ಅದಕ್ಕಿಂತಲೂ ಹೆಚ್ಚು ಆತಂಕಪಡಬೇಕಾದುದು, ಹೆಣ್ಣಿನ ಮೇಲಿನ ದಮನಕಾರಿ ಘಟನೆಗಳಿಗೆ ನಾಗರಿಕ ಸಮಾಜ ಮೌನವಾಗಿರುವುದು ಇಲ್ಲವೇ ನಿರ್ಲಕ್ಷಿಸುವುದು.

■ ರಘುನಾಥ ಚ.ಹ.